

ಜೈಲರ್: ನಿನ್ನನ್ನು ಭೇಟಿಯಾಗಲು ಈವರೆಗೆ ಯಾರೂ ಬಂದೇ ಇಲ್ಲ; ಏಕೆ, ನಿನಗೆ ಸಂಬಂಧಿಕರು ಅಥವಾ ಮಿತ್ರರು ಯಾರೂ ಇಲ್ಲವೆ?

ಖೈದಿ: ಇದ್ದಾರೆ ಸಾರ್, ಅವರೆಲ್ಲರೂ ಬೇರೆ ಬೇರೆ ಜೈಲುಗಳಲ್ಲಿ ಬಂಧಿಗಳಾಗಿದ್ದಾರೆ!

★★★

ಮುಳುಗುತ್ತಿದ್ದ ಹಡಗಿನಲ್ಲಿ ಕೊನೆಯ ಆಸರೆಗೆಂದು ಗೋಪಿ ಕ್ಯಾಪ್ಟನ್‌ನಲ್ಲಿ ವಿಚಾರಿಸಿದ;

'ಭೂಮಿ ಇಲ್ಲಿಂದ ಎಷ್ಟು ದೂರದಲ್ಲಿದೆ?'

'ಕ್ಯಾಪ್ಟನ್: ಸುಮಾರು 1 ಕಿ.ಮಿ. ದೂರದಲ್ಲಿದೆ.

ವಿಳಂಬಿಸದೆ ಸಮುದ್ರಕ್ಕೆ ಜಿಗಿದ ಗೋಪಿ ಅಲ್ಲಿಂದಲೇ ಕೇಳಿದ, ಯಾವ ದಿಕ್ಕಿನಲ್ಲಿ?'

ಕ್ಯಾಪ್ಟನ್: ಸೀದಾ ಕೆಳಕ್ಕೆ..!

★★★



ಯುವತಿ: ನಿನ್ನನ್ನು ನಾನು ಬೇರೆಲ್ಲೋ ನೋಡಿದ್ದೇನೆ..!

ಭಿಕ್ಷುಕ: ಓಹೋ.. ಮೇಡಂ, ನೀವು ಇಷ್ಟು ಬೇಗ ಮರೆತು ಬಿಡುವುದಾ? ನಾವಿಬ್ಬರೂ 'ಫೇಸ್ ಬುಕ್'ನಲ್ಲಿ ಫ್ರೆಂಡ್ಸ್ ಆಗಿದ್ದೆವು..!

★★★

ರಾಮು: ನಾನು ಶಾಲೆಯ ಛದ್ಮವೇಷ ಸ್ಪರ್ಧೆಯಲ್ಲಿ 'ಕೋತಿ' ವೇಷ ಧರಿಸಿದ್ದೆ. ನನಗೆ ದ್ವಿತೀಯ ಬಹುಮಾನ ಸಿಕ್ಕಿತು.

ಗೋಪಿ: ಛೆ, ಅನ್ಯಾಯವಾಗಿ ಹೋಯಿತು; ನೀನು ವೇಷ ಹಾಕದೇ ನೈಜವಾಗಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರೆ ಖಂಡಿತ ಪ್ರಥಮ ಬಹುಮಾನ ಸಿಗುತ್ತಿತ್ತು.

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್



ಮಂಟಾ ಹೆಣದ ಫೋಟೋ ತೆಗೆಯುತ್ತಿದ್ದ...

ತಕ್ಷಣ ಹೆಣದ ಸಂಬಂಧಿಗಳು ಮಂಟಾನಿಗೆ ಹೊಡೆಯಲು ಪ್ರಾರಂಭಿಸಿದರು. ಯಾಕೆ ಎಂದು ಗೊತ್ತಾಯಿತಾ?

ಫೋಟೋ ತೆಗೆಯುವಾಗ ಮಂಟಾ 'ಸ್ಮೈಲ್ ಪ್ಲೀಸ್' ಅಂತ ಪಟ್ಟು ಹಿಡಿದಿದ್ದ.

★★★

ಮಂಟಾನಿಗೆ ಅಪಘಾತವಾಯಿತು.

ಡಾಕ್ಟರ್: ನಿಮಗೆ ಹೊಲಿಗೆ ಹಾಕಬೇಕು.

ಮಂಟಾ: ಎಷ್ಟು ಖರ್ಚಾಗುತ್ತೆ?

ಡಾಕ್ಟರ್: 50 ಸಾವಿರ ರೂಪಾಯಿ.

ಮಂಟ: ಹೊಲಿಗೆ ಹಾಕ್ತೀರಾ? ಇಲ್ಲ ಎಂಬ್ರಾಯಿಡರಿ ಮಾಡ್ತೀರಾ?

ಸಂಗ್ರಹ: ಮಣೇಗಾರ ಜಗನ್ ಜ್ಯೋತಿ

